ತನ್ನ ಶಾಲೆ ಇವೆಲ್ಲಕ್ಕೆ ಸರಿಯಾದ ಕಾರಣವಿರುವುದಾದರೂ ಹೇಗೆ? ಇಂಥವನ್ನು ಅವನು ಇಚ್ಛಿಸುವುದಾದರೂ ಹೇಗೆ? ಶಾಲೀನ್ ಹಗಲು ರಾತ್ರಿಗಳಲ್ಲಿ ಯೋಚಿಸಿ ಅತ್ತು ಒಣಗಿದ ಬರಡು ಎದೆಯಲ್ಲಿ ಬರೀ ಪ್ರಶ್ನೆಗಳೇ ಈಗ. ಹದಿನೆಂಟು ತುಂಬಿ ರೆಫ್ಯೂಜಿ ಕ್ಯಾಂಪಿನಿಂದ ಹೊರಬೀಳುವಷ್ಟರಲ್ಲಿ ಪುಟ್ಟ ಶಾಲೀನ್ ಗಟ್ಟಿ ಕಲ್ಲಾಗಿಬಿಟ್ಟಳು. ಸಂಪೂರ್ಣ ಇಂಗ್ಲಿಷ್ ಕಲಿತು ವ್ಯವಹಾರ ಚತುರೆಯೂ ಆಗಿದ್ದಳು ಈಗ. ಹೋಟೆಲುಗಳಲ್ಲಿ ಕಸಮುಸುರೆಯ ಚಾಕರಿ, ವೇಟ್ರೆಸ್ ಎಂದು ಏನೇನೋ ಕೆಲಸ ಹಿಡಿದು ಭಾಷೆ ಕಲಿತು ಸ್ವಂತಕ್ಕೊಂದು ಜೀವನ ಕಟ್ಟಿಕೊಂಡಿದ್ದಳು. ರಕ್ತಗತವಾಗಿ ಬಂದಿದ್ದ ನೃತ್ಯ ಎಲ್ಲ ನೋವಿನ ನೆನಪುಗಳ ಮರೆಸುವ ಮದ್ದಾಗಿ ಪರಿಣಮಿಸಿತ್ತು. ನೃತ್ಯ ಅವಳಿಗೆ ತೀರ ಖಾಸಗಿಯ ಆಚರಣೆ. ಏಕಾಂತದ ಆರಾಧನೆಯದು. ಆದರೆ, ಅದೇ ಈಗ ಇಲ್ಲಿ ಹರಾಜಿನ ಸಂಗತಿಯಾಗಿಬಿಟ್ಟಿತ್ತು. ಎಲ್ಲಿ ಕೆಲ್ಸಕ್ಕಿದ್ದರೂ ತಾನು ಮೂಲತಃ ಲೆಬನೀಸ್ ಅಂದ ತಕ್ಷಣ ಕೇಳುತ್ತಿದ್ದ ಮೊದಲ ಪ್ರಶ್ನೆ ಎಂದರೆ ಹೋ ಹಾಗಿದ್ದರೆ ನಿಂಗೆ ಬೆಲ್ಲಿ ಡಾನ್ಸಿಂಗ್ ಬರಬೇಕಲ್ಲವೇ? ಮೊದಮೊದಲು ಇವರೆಂತ ವಿಚಿತ್ರ ಜನ ಲೆಬನೀಸ್ ಅಂದ ತಕ್ಷಣ ಎಲ್ಲರಿಗೂ ಸೊಂಟ ತಿರುಗಿಸಲು ಬರಲೇಬೇಕೇನು? ಅಮ್ಮನಿಗೆಲ್ಲಿ ಬರುತ್ತಿತ್ತು? ಚಿಕ್ಕಮ್ಮನ ನೃತ್ಯಕ್ಕೆ ಮನಸೋತು ನಾವೆಲ್ಲಾ ಕದ್ದುಮುಚ್ಚಿ ಅವಳಲ್ಲಿ ಕಲಿತದ್ದಲ್ಲವೇ? ಆ ನೃತ್ಯವಾದರೂ ಹೇಗೆ? ಅಮ್ಮನಿಗೆ ತಾನು ನರ್ತಿಸಿದರೆ ಎಲ್ಲಿಲ್ಲದ ಸಿಟ್ಟು. ಕಲಿತದ್ದೂ ಅವಳು ಅಮ್ಮನಿಲ್ಲದ ಸಮಯದಲ್ಲಿ ಕದ್ದು ಕದ್ದೆ. ಶಾಲೀನ್ ಮನಸಲ್ಲೇ ಹಲ್ಲುಕಚ್ಚಿ 'ಯಹ್ ಐನೋ ಬೆಲ್ಲಿದಾನ್ಸಿಂಗ್' ಎನ್ನುತ್ತಿದ್ದಳು. ಅಲ್ಲಿಂದ ಅವಳ ಬಗ್ಗೆ ಉಳಿದವರಿಗೆಲ್ಲ ಒಂದೋ, ಇವಳು ಸೆಲೆಬ್ರಿಟಿ ಎನ್ನುವಂತ ಭಾವನೆಯಾದರೆ, ಮತ್ತೆ ಹಲವರಿಗೆ ಇವಳು ಸ್ವಲ್ಪ ಪ್ರಯತ್ನಿಸಿದರೆ ಸುಲಭಕ್ಕೆ ದಕ್ಕುವವಳು ಎನಿಸುತ್ತಿತ್ತು. ಎಷ್ಟು ಕೆಲಸ ಬದಲಿಸಿದರೂ ಕೊನೆಗೊಂದು ಗ್ರೀಕ್ ರೆಸ್ಟೋರೆಂಟಿನಲ್ಲಿ ವೇಟರೆಸ್ ಮತ್ತು ಡಾನ್ಸರ್ ಎಂದೇ ಕೆಲಸ ಕಾಯಮಾಗಿತ್ತು.

ನೃತ್ಯ ಅವಳ ಪಾಲಿಗೆ ಎಲ್ಲ ನೋವಿನ ಬಿಡುಗಡೆಯ ಕುಣಿತ. ನಲಿವಿನ ನೋಟಕ್ಕೆಂದು ಊಟಕ್ಕೆ ಬರುವವರೆದುರು ಶಾಲೀನ್ ಕುಣಿಯುತ್ತಿದ್ದದ್ದು ಉರಿದ ಮನೆಗಳ ನೆನಪಿನಲ್ಲಿ, ಮನದಲ್ಲಿ ಸಿಡಿವ ಮದ್ದುಗುಂಡುಗಳ ಶಬ್ದ ಮರೆಸಲು ತಮಟೆಯ ಸದ್ದು ಬೇಕಾಗಿ. ಕಳೆದ ಕೊಂಡಿಗಳ ಹುಡುಕಿ ಹುಡುಕಿ ಸುಸ್ತಾಗಿ, ಕುಣಿದು ದಣಿವ ಸಲುವಾಗಿ. ಒಮ್ಮೊಮ್ಮೆ ತಾನು ಅಮ್ಮನ ಅಪ್ಪಣೆಯಿಲ್ಲದೆ ನೃತ್ಯ ಕಲಿತದ್ದಕ್ಕೆ ಅವನ ಸಿಟ್ಟಿಗೆ ಗುರಿಯಾಗಿ ಅಮ್ಮ ಹೋದಳೋ ತನ್ನ ಬಾಳಿಂದ ಎನಿಸಿದ್ದೂ ಉಂಟು. ಆದರೆ ಅವಳು ಎಷ್ಟು ನಿರಾಕರಿಸಿದರೂ ನಿರ್ವಾಣ ದಕ್ಕಿದ್ದು ಮಾತ್ರ ಅವಳಿಗೆ ನೃತ್ಯದಲ್ಲಿ. ಹಾಗಾಗಿಯೇ ಒಂದಷ್ಟು ಹಣವಾದದ್ದೇ ಹುಡುಕಿ ಹೊರಟಿದ್ದಳು ಮರಳುಗಾಡಿನ ಮಡಿಲಲ್ಲಿ ಮುರಿದು ಬಿದ್ದ ಹೃದಯಗಳನ್ನು ಮತ್ತೆ ಜೋಡಿಸಲು. ಬಾಸ್ಟನ್ನಿನ ರೆಫ್ಯೂಜಿ ಸೆಂಟರಿನಲ್ಲಿ ಮತ್ತೆ ಸಂಪರ್ಕಿಸಿ, ವಾಲಂಟ್ಯರ್ ಎಂದು ದಾಖಲಿಸಿಕೊಂಡು, ರೆಫ್ಯೂಜಿಗಳಿಗಾಗಿ ಹೋರಾಡುವವರಿಗೆ ಸರ್ಕಾರ ಒದಗಿಸುವ ಸಹಾಯಧನಕ್ಕಾಗಿ ಸಾಕಷ್ಟು ಪರದಾಡಿ ಒಂದಷ್ಟು ಪರಿಹಾರಧನ ದೊರಕಿದ ಬಳಿಕ, ಮಿಡ್ಲ್ ಈಸ್ಟ್ ರೆಫ್ಯೂಜಿಗಳಲ್ಲಿ ದಿಕ್ಕುದೆಸೆಯಿಲ್ಲದವರಿಗೆ ಪುಕ್ಕಟೆ ಬೆಲ್ಲಿ ಡಾನ್ಸಿಂಗ್ ಕಲಿಸುತ್ತಾ ಹುಟ್ಟಿಕೊಂಡದ್ದು ಅವಳ ಈ ನೃತ್ಯಶಾಲೆ. ಈಗ ಅವರೆಲ್ಲ ಸೇರಿ ಜಗತ್ತಿನ ಸಕಲ ಭಾಗದಿಂದ ಬರುವ ರೆಫ್ಯೂಜಿಗಳಿಗೆ, ಯುದ್ಧದಲ್ಲಿ ಅಂಗವಿಕಲರಾದವರಿಗೆ, ಕುರುಡು, ಕಿವುಡು ಮಕ್ಕಳಿಗೆಲ್ಲ ನೃತ್ಯ ಕಲಿಸುವ ಶಾಲೆಯಾಗಿ ವಿಸ್ತೃತಗೊಂಡಿತ್ತು. ಬೇರೆ ಜೀವನೋಪಾಯ ಕಂಡುಕೊಂಡ ನಿರಾಶ್ರಿತರೂ ಎದೆ ಹೊತ್ತಿ ಉರಿದಾಗೆಲ್ಲ ಬಂದೊಮ್ಮೆ ಇವಳೊಡನೆ ಕುಣಿದು ಹೋಗುತ್ತಿದ್ದರು.

*****